Volume 2, Issue 7 July 2016 ISSN NO: 2454 - 2326

# North Asian International Research Journal Consortium

## North Asian International Research Journal Of Multidisciplinary

Chief Editor
Dr. Nisar Hussain Malik

Publisher
Dr. Bilal Ahmad Malik

Associate Editor
Dr.Nagendra Mani Trapathi

CIF IMPACT FACTOR: 4.465

NAIRJC JOURNAL PUBLICATION

North Asian
International
Research Journal Consortium

# Welcome to NAIRJC

**ISSN NO: 2454 - 2326**

North Asian International Research Journal is a multidisciplinary research journal, published monthly in English, Hindi, Urdu all research papers submitted to the journal will be double-blind peer reviewed referred by members of the editorial board. Readers will include investigator in Universities, Research Institutes Government and Industry with research interest in the general subjects

## Editorial Board

| | | |
|---|---|---|
| J.Anil Kumar<br>Head Geography University of Thirvanathpuram | Sanjuket Das<br>Head Economics Samplpur University | Adgaonkar Ganesh<br>Dept. of Commerce, B.S.A.U Aruganbad |
| Kiran Mishra<br>Dept. of English,Ranchi University, Jharkhand | Somanath Reddy<br>Dept. of Social Work, Gulbarga University. | Rajpal Choudhary<br>Dept. Govt. Engg. College Bikaner Rajasthan |
| R.D. Sharma<br>Head Commerce & Management Jammu University | R.P. Pandday<br>Head Education Dr. C.V.Raman University | Moinuddin Khan<br>Dept. of Botany SinghaniyaUniversity Rajasthan. |
| Manish Mishra<br>Dept. of Engg, United College Ald.UPTU Lucknow | K.M Bhandarkar<br>Praful Patel College of Education, Gondia | Ravi Kumar Pandey<br>Director, H.I.M.T, Allahabad |
| Tihar Pandit<br>Dept. of Environmental Science, University of Kashmir. | Simnani<br>Dept. of Political Science, Govt. Degree College Pulwama, University of Kashmir. | Ashok D. Wagh<br>Head PG. Dept. of Accountancy, B.N.N.College, Bhiwandi, Thane, Maharashtra. |
| Neelam Yaday<br>Head Exam. Mat.K..M .Patel College Thakurli (E), Thane, Maharashtra | Nisar Hussain<br>Dept. of Medicine A.I. Medical College (U.P) Kanpur University | M.C.P. Singh<br>Head Information Technology Dr C.V. Rama University |
| Ashak Husssain<br>Head Pol-Science G.B, PG College Ald. Kanpur University | Khagendra Nath Sethi<br>Head Dept. of History Sambalpur University. | Rama Singh<br>Dept. of Political Science A.K.D College, Ald.University of Allahabad |

**Address: -North Asian International Research Journal Consortium (NAIRJC) 221 Gangoo, Pulwama, Jammu and Kashmir, India -192301, Cell: 09086405302, 09906662570, Ph. No: 01933-212815,**
**Email:** nairjc5@gmail.com, info@nairjc.com **Website:** www.nairjc.com

North Asian International Research Journal of Multidisciplinary ISSN: 2454 - 2326 Vol. 2, Issue 7 July 2016

CIF IMPACT FACTOR: 4.465

# ಬೌದ್ಧರ ಕಾಲದ ಶಿಕ್ಷಣ ಪದ್ಧತಿ

**ಮಯೂರ ಕುದರಿ**

ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ರಾಚವಿವಿ ಸ್ನಾತಕೋತ್ತರ ಕೇಂದ್ರ, ವಿಜಾಪೂರ.

## ಪ್ರಸ್ಥಾವನೆ:

ಪ್ರಸ್ತುತ ದಿನಗಳಲ್ಲಿ ಒಂದು ಸಮಾಜವು ಸರ್ವಾಂಗಿಣ ಅಭಿವೃದ್ಧಿಯಾಗಿ, ಉನ್ನತ ಹಂತದಲ್ಲಿರಬೇಕೆಂದರೆ ಆ ಸಮಾಜವು ಶಿಕ್ಷಣವನ್ನು ಪಡೆದಿರುವ ಪ್ರಜೆಗಳನ್ನು ಹೊಂದಿರಬೇಕು, ಅದು ಎಲ್ಲಾ ವರ್ಗದವರಿಗೂ ಶಿಕ್ಷಣವು ದೊರಕುವಂತಿರಬೇಕು ಅಂದಾಗ ಮಾತ್ರ ಆ ಸಮಾಜವು ಸರ್ವೋತೋಮುಖ ಬೆಳವಣಿಗೆಗೆ ಸಹಾಯಕವಾಗುತ್ತದೆ., ಇದು ಇಂದಿನ ಸಮಾಜಕ್ಕೂ ಅನ್ವಯವಾಗುತ್ತದೆ. ಅದೇ ರಿತಿಯಾಗಿ ಹಿಂದಿನ ಸಮಾಜಗಳಿಗೂ ಅನ್ವಯವಾಗುತ್ತದೆ ಎಂದು ಹೇಳಬಹುದು. ಈ ಹೇಳಿಕೆಯನ್ನು ಬೌದ್ಧರ ಕಾಲದ ಶಿಕ್ಷಣ ಪದ್ಧತಿಯನ್ನು ಇತಿಹಾಸದ ಪುಟ ತಿರುವಿ ನೋಡಿದಾಗ ನಿಜ ಎಂದು ತಿಳಿದುಬರುತ್ತದೆ. ಬುದ್ಧನಿಂದ ಸ್ಥಾಪಿತವಾದ ಬೌದ್ಧ ಧರ್ಮವು ಕೇವಲ ಧಾರ್ಮಿಕ ವಿಷಯಕ್ಕೆ ಮಾತ್ರ ಸಿಮಿತವಾಗಿರದೇ ಉನ್ನತವಾದ ಶೈಕ್ಷಣಿಕ ವಿಚಾರಗಳನ್ನು ಸಮಾಜಕ್ಕೆ ಬಿತ್ತರಿಸಿದ ಧರ್ಮವು ಹೌದು ಎಂದು ತಿಳಿದುಬರುತ್ತದೆ. ಭಗವಾನ ಬುದ್ಧನ ವಿಚಾರಗಳನ್ನೆ ಶೈಕ್ಷಣಿಕ ಜೀವನಕ್ಕೂ ಅಳವಡಿಸಿಕೊಂಡಾಗ ಒಬ್ಬ ವ್ಯಕ್ತಿ ಅಷ್ಟೆ ಅಲ್ಲಾ, ಒಂದು ಸಮಾಜ ಅಷ್ಟೆ ಅಲ್ಲಾ, ಒಂದು ರಾಷ್ಟ್ರ ಅಷ್ಟೆ ಅಲ್ಲಾ, ಇಡೀ ಜಗತ್ತೆ ಶಾಂತಿ–ಸೌಹರ್ದತೆಯಿಂದ, ಬಾತೃತ್ವತೆಯಿಂದ ಹೇಗೆ ಜೀವನ ಸಾಗಿಸಬೇಕೆಂಬುದನ್ನು ಹೇಳಿಕೊಡುತ್ತವೆ. ಅಷ್ಟೆ ಅಲ್ಲದೇ ಇಡೀ ಮನುಕುಲದ ಕಲ್ಯಾಣವನ್ನು ಬಯಸುವಂತಹ ವಿಚಾರಗಳು ಇವರ ಶಿಕ್ಷಣ ನೀತಿಯಲ್ಲಿವೆ ಎಂದು ಗೊತ್ತಾಗುತ್ತದೆ.

## ಉದ್ಧೇಶಗಳು:

೧. ಬೌದ್ಧ ಕಾಲದ ಸಾಮಾಜಿಕ ಜೀವನವನ್ನು ತಿಳಿಯುವುದು.

೨. ಬೌದ್ಧರ ಕಾಲದ ವಿದ್ಯಾರ್ಥಿಗಳ ಜೀವನ ಶೈಲಿಯನ್ನು ತಿಳಿಯುವುದು.

೩. ಬೌದ್ಧರ ಕಾಲದಲ್ಲಿಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಸಂಬಂಧವನ್ನು ತಿಳಿಯುವುದು.

## ಬೌದ್ಧರ ಕಾಲದ ಶಿಕ್ಷಣ ಪದ್ದತಿಯ ಗುರಿಗಳು:

ಬೌದ್ಧ ಕಾಲದ ಶಿಕ್ಷಣ ಪದ್ಧತಿಯು ಹಲವಾರು ಗುರಿಗಳನ್ನು ಹೊಂದಿತ್ತು ಅದರಲ್ಲಿ ಪ್ರಮುಖವಾಗಿ ಹೇಳಬೇಕೆಂದರೆ

೧. ವ್ಯಕ್ತಿಯ ಸರ್ವಾಂಗಿಣ ಬೆಳವಣಿಗೆಯನ್ನು ಮಾಡುವುದು.

೨. ಮಕ್ಕಳಲ್ಲಿ ಶಿಸ್ತು ಮತ್ತು ಸಂಯಮವನ್ನು ಕಲಿಸುವುದು.

೩. ಧರ್ಮದ ಮೂಲಕ ಸಾಮಾಜಿಕ ಜ್ಞಾನ ಪ್ರಸಾರ ಮಾಡುವುದು.

೪. ಬೌದ್ಧ ಧರ್ಮದಲ್ಲಿ ನಂಬಿಕೆ ಬೆಳೆಸುವುದು.

೫. ಬೌದ್ಧ ತತ್ವಗಳನ್ನು ಮತ್ತು ಭೋದನೆಗಳ ಮೂಲಕ ಪ್ರಸಾರ ಮಾಡುವುದು.

೬. ಬೌದ್ಧ ಧರ್ಮದ ಜೊತೆಗೆ ಇತರ ಧಾರ್ಮಿಕ ಭಾವನೆಗಳ ಬೆಳವಣಿಗೆಯನ್ನು ಮಾಡುವುದು.

೭. ನಿರ್ವಾಣವನ್ನು ಹೊಂದುವುದರ ಬಗ್ಗೆ ತಿಳುವಳಿಕೆ ನೀಡುವುದು.

## ಬೌದ್ಧರ ಕಾಲದ ಶಿಕ್ಷಣದ ಪ್ರವೇಶ

ಇಂದಿನ ಕಾಲದ ಶಿಕ್ಷಣ ಪದ್ಧತಿಯಲ್ಲಿ ಶಾಲೆಯ ಪ್ರವೇಶಾತಿಯ ಬಗ್ಗೆ ಇರುವ ನಿಯಮಗಳು ಬೌದ್ಧ ಕಾಲದ ಶಿಕ್ಷಣ ಪದ್ಧತಿಯಲ್ಲಿಯೂ ಸಹಿತ ಇತ್ತು ಎಂದು ನಮಗೆ ಬೌದ್ಧ ಗ್ರಂಥಗಳಿಂದ ತಿಳಿದು ಬರುತ್ತದೆ ಅದರಲ್ಲಿ ಪ್ರಮುಖವಾಗಿ ೨ ವಿಧಾನಗಳನ್ನು ಕಾಣುತ್ತೇವೆ ೧) ಪಬ್ಬಜ ೨) ಉಪಸಂಪದ.

೧. ಪಬ್ಬಜ : ಪಬ್ಬಜ ಅನ್ನುವುದು ಬೌದ್ಧ ಶಿಕ್ಷಣ ಪ್ರವೇಶಾತಿಯಲ್ಲಿ ಬರುವ ಮೊದಲನೆಯ ನಿಯಮವಾಗಿದೆ, ಬೌದ್ಧ ಶಿಕ್ಷಣ ಪ್ರವೇಶಾತಿಯ ಮುನ್ನ ನೀಡುವ ದೀಕ್ಷೆಗೆ ಪಬ್ಬಜ ಎಂದು ಕರೆಯುತ್ತಿದ್ದರು. ಈ ಪದ್ಧತಿಯ ಮೂಲಕ ವಿದ್ಯಾರ್ಥಿಯು ತನ್ನ ೮ನೇ ವರ್ಷದಲ್ಲಿ ಬೌದ್ಧ ವಿಹಾರ ಎನ್ನುವ ಶಾಲೆಗೆ ಪ್ರವೇಶಾತಿಯನ್ನು ಪಡೆಯುತ್ತಿದ್ದನು, ಪಬ್ಬಜ ಎಂದರೆ ಪೂರ್ವಸಿದ್ಧತೆಯಿಂದ ಹೊರಬರುವುದು ಎಂದರ್ಥವಾಗುತ್ತದೆ, ವೈದಿಕ ಶಿಕ್ಷಣ ಪದ್ಧತಿಯ ಉಪನಯನ ಸಂಸ್ಕಾರಕ್ಕೆ ಇದು ತತ್ಸಮವೆಂದು ಹೇಳಬಹುದು., ವಿದ್ಯಾರ್ಥಿಯ ತಲೆಯನ್ನು ಬೋಳಿಸಿಕೊಂಡು ಹಳದಿ/ಅರಿಷಿಣ ಬಣ್ಣದ ವಸ್ತ್ರವನ್ನು ಧರಿಸಿಕೊಂಡು ಭಿಕ್ಷುಗಳಿರುವ ಬೌದ್ಧವಿಹಾರಗಳಿಗೆ ಹೋಗಿ ಮೊಣಕಾಲೂರಿ ಪಾದಗಳಿಗೆ ನಮಸ್ಕರಿಸುವುದರೊಂದಿಗೆ,

“ಬುದ್ಧಂ ಶರಣಂ ಗಚ್ಛಾಮಿ
ಧರ್ಮಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ”

ಎಂದು ಮೂರು ಬಾರಿ ಪ್ರಮಾಣವಚನಗಳನ್ನು ಸ್ವಿಕರಿಸಬೇಕಾಗಿತ್ತು ಅಲ್ಲಿಗೆ ಹತ್ತು ನಿಯಮಗಳನ್ನು ಪಾಲಿಸುತ್ತೆನೆಂದು ಪ್ರತಿಜ್ಞೆ ಕೈಗೊಳ್ಳಬೇಕಾಗಿತ್ತು ಅವುಗಳೆಂದರೆ ೧) ಕದಿಯುವುದಿಲ್ಲಾ ೨)ಯಾವುದೇ ಜೀವನವನ್ನು ತೆಗೆದುಕೊಳ್ಳುವುದಿಲ್ಲಾ / ಕೊಲ್ಲುವುದಿಲ್ಲಾ ೩) ಅಸಭ್ಯವಾಗಿ ವರ್ತಿಸುವುದಿಲ್ಲಾ ೪) ನಿಷೇದಿತ ಸಂಧರ್ಭಗಳಲ್ಲಿ ಆಹಾರವನ್ನು ಸೇವಿಸುವುದಿಲ್ಲಾ ೫) ಮಧ್ಯ ಹಾಗೂ ಮತ್ತು ಬರುವ ಪದಾರ್ಥಗಳನ್ನು ಉಪಯೋಗಿಸುವುದಿಲ್ಲಾ ೬) ಸುಗಂಧ ದ್ರವ್ಯಗಳನ್ನು ಬಳಸುವುದಿಲ್ಲಾ ೭) ಬಿಕ್ಷಾಟನೆಯಲ್ಲಿ ಬೆಲೆಬಾಳುವ ವಸ್ತುಗಳನ್ನು ತೆಗೆದುಕೊಳ್ಳುವುದಿಲ್ಲಾ ೮) ನೃತ್ಯ ಮಾಡುವುದಿಲ್ಲಾ ೯) ಸಂಗೀತವನ್ನು ಆಲಿಸುವುದಿಲ್ಲಾ ೧೦) ಬೌದ್ಧ ವಿಹಾರದ ನಿಯಮಗಳಿಗೆ ಒಳಪಟ್ಟಿರುವೇನು.

ಈ ಹತ್ತು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುತ್ತೇನೆಂದು ಮಾಡುವ ಪ್ರತಿಜ್ಞೆಯ ಕಾರ್ಯಕ್ಕೆ 'ಶ್ರಮಣ' ಎಂದು ಕರೆಯುತ್ತಿದ್ದರು. ಈ ಪ್ರವೇಶಾತಿ ಪಡೆಯುವಾಗ ಸಾಮಾನ್ಯವಾಗಿ ಜಾತಿ ಮತಗಳ ಭೇದಕ್ಕೆ ಅವಕಾಶವಿರಲಿಲ್ಲ., ಆದರೆ ಕೇಲವು ಸಂಧರ್ಬಗಳಲ್ಲಿ ಪ್ರವೇಶದ ನಿಯಮಗಳಲ್ಲಿ ಬಿಗಿಗೊಳಿಸಲಾಗುತ್ತಿತ್ತು ಮತ್ತು ಕೇಲವರಿಗೆ ಶಿಕ್ಷಣದ ಪ್ರವೇಶಕ್ಕೆ/ ಶಿಕ್ಷಣವನ್ನು ಪಡೆದುಕೊಳ್ಳಲು ನಿರ್ಭಂದ ಹೇರಲಾಗಿತ್ತು ಅವರೆಂದರೆ ಚಂಡಾಲರು, ಅಪರಾಧಿಗಳು, ಅಂಟು ಜಾಡ್ಯರಿರುವವರು ಮತ್ತು ಗುಲಾಮರು ಮುಂತಾದವರು.

೨. ಉಪಸಂಪದ : ವಿದ್ಯಾರ್ಥಿಗಳು ಸುಮಾರು ೨೦ ವರ್ಷದ ನಂತರ ಈ ಸಂಸ್ಕಾರಕ್ಕೆ(ಉಪಸಂಪದ) ಒಳಪಡುತ್ತಿದ್ದರು. ಈ ಸಂಸ್ಕಾರ ನಡೆಯಬೇಕಾದರೆ ಕಡ್ಡಾಯವಾಗಿ ೧೦ ಬೌದ್ಧಬಿಕ್ಷುಗಳು ಇರಲೇಬೇಕಾಗಿತ್ತು ಮತ್ತು ೫ ನಿಯಮಗಳನ್ನು ಪಾಲಿಸುತ್ತೆನೆಂದು ಅವರೆದುರು ಪ್ರತಿಜ್ಞೆಯನ್ನು ಮಾಡಬೇಕಾಗಿತ್ತು., ಆ ೫ ನಿಯಮಗಳೆಂದರೆ,

೧. ಗಿಡ/ಮರದ ಕೆಳಗಡೆ ವಾಸಿಸುತ್ತೇನೆ.

೨. ಬಿಕ್ಷಾಟನೆಯ ಪಾತ್ರೆಯಲ್ಲಿ ಊಟ ಮಾಡುತ್ತೇನೆ.

೩. ಬೇರೆಯವರಿಂದ ಪಡೆದ ಬಟ್ಟೆಗಳನ್ನು/ವಸ್ತುಗಳನ್ನು ಧರಿಸುತ್ತೇನೆ.

೪. ಹಸುವಿನ/ಗೋ ಮೂತ್ರವನ್ನು ಕಾಯಿಲೆಯ ಚಿಕಿತ್ಸೆಗಾಗಿ ಬಳಸುತ್ತೇನೆ.

೫. ಎಲ್ಲಾ ರೀತಿಯಿಂದಲೂ ಸಜ್ಜನನಾಗಿರುತ್ತೇನೆ.

ಈ ನಿಯಮಗಳು ಭಿಕ್ಷುಗಳ ಎದುರಿನಲ್ಲಿ ನಡೆಯುತ್ತಿತ್ತು ಈ ಕ್ರಿಯೆಗೆ ಉಪಸಂಪದ ಎಂದು ಕರೆಯುತ್ತಿದ್ದರು, ಈ ಹಂತದ ನಂತರ ಪುರುಷನನ್ನು ಭಿಕ್ಷು ಎಂದು, ಸ್ತ್ರೀಯರನ್ನು ಭಿಕ್ಷುಣಿ ಎಂದು ಕರೆಯುತ್ತಿದ್ದರು. ಈ ವಿಧಾನವನ್ನು ಇಂದಿನ ಪದವಿ ಸಮಾರಂಭಕ್ಕೆ ಹೋಲಿಸಬಹುದು, ಇಲ್ಲಿ ಬೌದ್ಧ ಭಿಕ್ಷುಗಳು/ಭಿಕ್ಷುಣಿಯರು ತಮ್ಮ ಮಾನಸಿಕ ಹಿಡಿತಗಳನ್ನು ಗೆಲ್ಲಲು ಸಾಧ್ಯವಾಗದೇ ಇದ್ದಾಗ ಇದನ್ನು ತ್ಯಜಿಸುವ ಹಕ್ಕನ್ನು ಹೊಂದಿದ್ದರು.

**ಶಿಕ್ಷಣದ ಅವಧಿ:**

ಬೌದ್ಧ ಕಾಲದ ಶಿಕ್ಷಣದ ಅವಧಿಯ ಒಟ್ಟಾರೆಯಾಗಿ ೨೨ ವರ್ಷವಾಗಿತ್ತು, ಇದರಲ್ಲಿ ೧೨ ವರ್ಷ ಪಬ್ಬಜ ಶಿಕ್ಷಣದಾದರೆ ಇನ್ನೂಳದ ೧೦ ವರ್ಷದ ಶಿಕ್ಷಣ ಉಪಸಂಪದಧಾಗಿತ್ತು.

**ಬೌದ್ಧ ಕಾಲದ ಬೋಧನಾ ಪದ್ಧತಿ:**

ಬೌದ್ಧ ಕಾಲದ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಗಳಿಗೆ/ಶಿಕ್ಷಣಾರ್ಥಿಗಳಿಗೆ ಬೊಧಕರು/ಗುರುಗಳು/ಆಚಾರ್ಯರರು ಹಲವಾರು ಪದ್ಧತಿಯನ್ನು ಬೋಧನೆಯನ್ನು ಮಾಡುತ್ತಿದ್ದರು ಅದರಲ್ಲಿ ಪ್ರಮುಖವಾದ ಬೋಧನಾ ವಿಧಾಗನಗಳೆಂದರೆ :

- ಕಂಠಪಾಠ
- ಮೌಖಿಕ ಪದ್ಧತಿ
- ಚರ್ಚೆ, ಗೋಷ್ಠಿ ಮತ್ತು ವಿಚಾರಸಂಕೀರ್ಣ
- ಅನುಗಮನ ಪದ್ಧತಿ
- ಪ್ರಶ್ನೋತ್ತರ ಪದ್ಧತಿ
- ಪ್ರವಾಸ ಪದ್ಧತಿ &
- ಉಪನ್ಯಾಸ ಪದ್ಧತಿ

ಈ ಮೇಲಿನ ಪದ್ಧತಿಗಳ ಮೂಲಕ ಬೋಧನೆಯನ್ನು ಮಾಡುತ್ತಿದ್ದರು.

**ಮಹಿಳೆಯರ /ಸ್ತ್ರೀ ಶಿಕ್ಷಣ:**

ಬೌದ್ಧ ಧರ್ಮದ ನಿಯಮಗಳು, ತತ್ವಗಳ ಪ್ರಕಾರ ಮಹಿಳೆಗೆ ಉನ್ನತವಾದ ಸ್ಥಾನಮಾನ ನೀಡಿರಲಿಲ್ಲ ಮತ್ತು ಶಿಕ್ಷಣದಲ್ಲಿಯೂ ಸಹಿತ ಸಮನಾದ ಸ್ಥಾನಮಾನವಿರಲ್ಲಿಲ್ಲ ಅಲ್ಲದೆ ಪ್ರಾರಂಭದಲ್ಲಿ ಮಹಿಳೆಯರಿಗೆ ಶಿಕ್ಷಣ ಕೊಡಲು ವಿಹಾರಗಳಲ್ಲಿ ಪವೇಶಾತಿಯನ್ನು ನಿರಾಕರಿಸಲಾಗಿತ್ತು ಆದರೆ ನಂತರದ ಅವಧಿಯಲ್ಲಿ ಇವರಿಗೂ ಅವಕಾಶವನ್ನು ಕೊಟ್ಟು ಸ್ತ್ರೀಯೂ ಶಿಕ್ಷಿತಳಾಗಲೂ ಸಹಾಯ ಮಾಡಲಾಯಿತು. ಅಲ್ಲದೆ ಇವರಿಗೆ ಪ್ರತ್ಯೇಕ ಬೌದ್ಧ ವಿಹಾರಗಳನ್ನು ಕೂಡಾ ಸ್ಥಾಪನೆಮಾಡಲಾಯಿತು ಮತ್ತು ಉನ್ನತ ಶಿಕ್ಷಣ ಪಡೆದ ಮಹಿಳೆಯರು ಶಿಕ್ಷಕಿಯರಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸಿಕೊಡಲಾಗಿತ್ತು., ಹೀಗೆ ಅವಕಾಶ ಪಡೆದುಕೊಂಡ ಮಹಿಳೆಯರ ಹೆಸರುಗಳನ್ನು ನಾವು ಇಲ್ಲಿ ಸ್ಮರಿಸಬಹುದು ಅವರೆಂದರೆ ಶುಭಾ, ಅನುಪಮಾ, ಸುಮೇದ, ಶೀಲಬಟ್ಟಾರಿಗೆ, ವಿಜಯಾಂಕ, ಪ್ರಭುದೇವಿ ಮತ್ತು ಸಂಘಮಿತ್ರೆ ಮುಂತಾದವರು ಎಂದು ಹೇಳಬಹುದು.

**ಪಠ್ಯವಸ್ತು:**

ಪಠ್ಯವಸ್ತುವಿಗೆ ಬಂದರೆ ಬೌದ್ಧಕಾಲದ ಶಿಕ್ಷಣ ಪದ್ಧತಿ ತನ್ನದೇ ಆದ ಪಠ್ಯವಸ್ತುವನ್ನು ಹೊಂದಿತ್ತು ಎಂದು ಹೇಳಬಹುದು. ವೇದಕಾಲದಂತೆ ಬೌದ್ಧಕಾಲದಲ್ಲಿ ಸಹಿತ ಧಾರ್ಮಿಕ ಮತ್ತು ಆಧ್ಯಾತ್ಮಿಕ ತಳಹದಿ ಮೇಲೆ ಶಿಕ್ಷಣವನ್ನು ನೀಡುತ್ತಿದ್ದರು., ಬೌದ್ಧ ಧರ್ಮದ ಗ್ರಂಥಗಳಂದ ತ್ರಿಪಿಟಕಗಳನ್ನು ಕಡ್ಡಾಯವಾಗಿ ಕಲಿಸಲೇಬೇಕಾಗಿತ್ತು. ಇವರ ಅವಧಿಯಲ್ಲಿ ಪಠ್ಯವಸ್ತುವನ್ನು ೨ ರೀತಿಯಲ್ಲಿ ವಿಂಗಡಿಸಲಗಿತ್ತು ಅದೆಂದರೆ ೧) ಪ್ರಾಥಮಿಕ ಹಂತ ಇದರಲ್ಲಿ ಬೌದ್ಧ ಧರ್ಮದ ತತ್ವಗಳನ್ನು, ಜಾತಕ ಕತೆಗಳನ್ನು ಕಲಿಸಲಾಗುತ್ತಿತ್ತು ಮತ್ತು ೨) ಈ ಹಂತದಲ್ಲಿ ವಿಶ್ವವಿದ್ಯಾನಿಲಯದ ಮಾದರಿಯಲ್ಲಿಯ ಶೈಕ್ಷಣಿಕ ಕೇಂದ್ರಗಳಂದ ಉನ್ನತ ಶಿಕ್ಷಣವನ್ನು ಹೇಳ ಕೊಡಲಾಗುತ್ತಿತ್ತು., ಇದಲ್ಲದೆ ಭೌತಿಕ ಜೀವನಕ್ಕೆ ಬೇಕಾದಂತಹ ಎಲ್ಲಾ ರೀತಿಯ ಶಿಕ್ಷಣವನ್ನು ಇಲ್ಲಿ ಕೊಡುತ್ತಿದ್ದರು.

**ವಿದ್ಯಾರ್ಥಿ ಶಿಕ್ಷಕರ ಸಂಬಂಧ :**

ಬೌದ್ಧರ ಕಾಲದ ಶಿಕ್ಷಣ ವ್ಯವಸ್ಥೆಯಲ್ಲಿ ಗುರು & ಶಿಷ್ಯರ ಸಂಬಂಧವು ತಂದೆ ಮತ್ತು ಮಗನ ಸಂಬಂಧದ ತರ ಇತ್ತು ಎಂದು ಹೇಳಬಹುದು. ಇನ್ನೂ ಮುಂದುವರೆದು ಹೇಳಬೆಕೆಂದರೆ ದೇವರು ಮತ್ತು ಅರ್ಚಕನ ಸಂಬಂಧದ ಹಾಗೇ ಇತ್ತು ಎಂದು ಹೇಳಬಹುದು. ಇವರ ಸಂಬಂಧವು ವೇದಕಾಲದ ಗುರು–ಶಿಷ್ಯರ ಸಂಬಂಧವನ್ನು ಹೋಲುತ್ತಿತ್ತು., ಅಂದರೆ ವೇದಕಾಲದ ಪದ್ಧತಿಯಂತೆ ಶಿಷ್ಯನು ಗುರುವಿನ ಎಲ್ಲಾ ಕೆಲಸವನ್ನು ಮಾಡುವಂತೆ ಇಲ್ಲಿಯೂ ಸಹ ಮಾಡುತ್ತಿದ್ದನು ಅಂದರೆ ಗುರುವಿನ ಸೇವೆಯನ್ನು ಭಯ ಭಕ್ತಿಯಿಂದ ಮಾಡುತ್ತಿದ್ದನು. ಒಂದು ವೇಳೆ ಗುರು ಸೇವೆಯನ್ನು ಮಾಡದವನ್ನು ಅನರ್ಹರೆಂದು ಸಂಘದಿಂದ ಹೊರಹಾಕಲಾಗುತ್ತಿತ್ತು., ಶಿಷ್ಯರು ತಮ್ಮ ತಮ್ಮ ಕಾರ್ಯಗಳನ್ನು ಗೌರವ ಪೂರ್ವಕವಾಗಿ ಮಾಡುತ್ತಿದ್ದರು., ಮತ್ತು ಸಾಧಾ ಜೀವನವನ್ನು ನಡೆಸುತ್ತಿದ್ದರು. ಅದೇ ರೀತಿಯಾಗಿ ಗುರುಗಳು/ಆಚಾರ್ಯರು ಸಹಿತ ವಿದ್ಯಾರ್ಥಿಗಳೊಂದಿಗೆ ಸಾದಾ ಜೀವನ, ನಿರಂತರ ಅಧ್ಯಯನ, ಬ್ರಹ್ಮಚರ್ಯ, ನಿಷ್ಕಲಂಕ ಚರಿತ್ರವಾನ ಹಾಗೂ ಆದರ್ಶಮಯವಾಗಿ ಜೀವನ ನಡೆಸುತ್ತಿದ್ದರು.

**ಬೌದ್ಧರ ಕಾಳದ ಪ್ರಮುಖ ಶೈಕ್ಷಣಿಕ ಕೇಂದ್ರಗಳು :**

ಇಂದಿನ ಕಾಲದಲ್ಲಿ ಇದ್ದ ಹಾಗೇ ಬೌದ್ಧ ಕಾಲದಲ್ಲಿಯೂ ಸಹಿತ ಸಾಕಷ್ಟು ಶೈಕ್ಷಣಿಕ ಕೇಂದ್ರಗಳದ್ದವು ಎಂಬುದು ನಮಗೆ ಹಲವಾರು ಐತಿಹಾಸಿಕ ದಾಖಲೆಗಳಂದ ತಿಳದು ಬರುತ್ತದೆ ಅವುಗಳಲ್ಲಿ ಪ್ರಮುಖವಾದವುಗಳೆಂದರೆ,

೧. ತಕ್ಷಶಿಲೆ : ಇದು ಬೌದ್ಧರ ಕಾಲದ ಪ್ರಮುಖ ಶೈಕ್ಷಣಿಕ ಕೇಂದ್ರವಾಗಿತ್ತು. ಈ ಪ್ರದೇಶವು ಗಾಂಧಾರ ರಾಜರ ರಾಜಧಾನಿಯೂ ಕೂಡಾ ಆಗಿತ್ತು., ಈ ಶೈಕ್ಷಣಿಕ ಕೇಂದ್ರದಲ್ಲಿ ಕಲಿಯಬೇಕಾದ ಮಕ್ಕಳ ಸಂಖ್ಯೆ ೧೬ ವರ್ಷವಾಗಿರಬೇಕಾಗಿತ್ತು. ಇಲ್ಲಿ

ಪ್ರಮುಖವಾಗಿ ವೇದಗಳು, ವ್ಯಾಕರಣ, ಜ್ಯೋತಿಷ್ಯಶಾಸ್ತ್ರ, ಆಯುರ್ವೇದ, ಮಿಲಿಟರಿ, ವ್ಯವಸಾಯ, ವೈದ್ಯಕೀಯ, ಸರ್ಪ ಚಿಕಿತ್ಸೆ ತಂತ್ರವಿದ್ಯೇ ಹೀಗೆ ಹಲವಾರು ವಿಷಯಗಳನ್ನು ಇಲ್ಲಿ ಕಲಿಸಲಾಗುತ್ತಿತ್ತು.

೨. ನಲಂದಾ : ಈ ನಲಂದಾ ವಿಶ್ವವಿದ್ಯಾನಿಲಯವು ಇಂದಿನ ಬಿಹಾರದ ಪಾಟ್ನಾ ಮತ್ತು ರಾಜಾಶ್ರಯ ಮಧ್ಯೇದಲ್ಲಿ ಸ್ಥಾಪನೆಯಾಗಿತ್ತು. ಇದು ಅಂದಿನ ಕಾಲದ ಪ್ರಮುಖ ಮತ್ತು ಅತ್ಯಂತ ದೊಡ್ಡದಾದ ಶೈಕ್ಷಣಿಕ ಕೇಂದ್ರವಾಗಿತ್ತು ಎಂದು ಹೇಳಬಹುದು. ಈ ಕೇಂದ್ರವು ಪ್ರಮುಖವಾಗಿ ಮೌರ್ಯ, ಗುಪ್ತರು ಮತ್ತು ವರ್ಧನ ಮನೆತನದ ಅರಸರ ಪೋಷಣೆಗೆ ಒಳಪಟ್ಟಿತ್ತು, ಅಲ್ಲದೆ ೭ನೇ ಶತಮಾನಕ್ಕೆ ಪ್ರಮುಖ ಶೈಕ್ಷಣಿಕ ಕೇಂದ್ರವಾಗಿ ಹೊರಹೊಮಿತ್ತು ಈ ವಿಶ್ವವಿದ್ಯಾನಿಲಯವು ೮ ಸಭಾಂಗಗಳನ್ನು, ೩೦೦ ಕೊಠಡಿಗಳನ್ನು ಹೊಂದಿತ್ತು ಅಲ್ಲದೆ ಬೃಹತ್ತಾದ ಗ್ರಂಥಾಲಯವನ್ನು ಒಳಗೊಂಡಿತ್ತು. ಈ ಗ್ರಂಥಾಲಯವು ರತ್ನಸಾಗರ, ರತ್ನದೋದಿ ಮತ್ತು ರತ್ನರಂಜಕ ಎಂಬ ಮೂರು ಪ್ರಮುಖ ವಿಭಾಗಗಳನ್ನು ಒಳಗೊಂಡಿತು. ಅಲ್ಲದೇ ಇಲ್ಲಿ ೩೦ ವಿಹಾರಗಳು ಪ್ರಸಾದ ನಿಲಯಗಳಾಗಿದ್ದವು, ಈ ವಿಶ್ವವಿದ್ಯಾನಿಲಯವು ಪ್ರಮುಖವಾಗಿ ಹಿನಯಾನ ಮತ್ತು ಮಹಾಯಾನ ಪಂಥದ ಪ್ರಮುಖ ಶೈಕ್ಷಣಿಕ ಕೇಂದ್ರವಾಗಿತ್ತು ಇಲ್ಲಿ ಪ್ರಮುಖವಾಗಿ ವೇದ, ವೇದಾಂಗ, ಪುರಾಣ ಮತ್ತು ವೈದ್ಯಕಿಯ ಶಾಸ್ತ್ರ ಕಲಿಯಲು ಅವಕಾಶವಿತ್ತು, ಈ ವಿಶ್ವವಿದ್ಯಾನಿಲಯವು ೧೫೦೦ ಆಚಾರ್ಯರನ್ನು ಹೊಂದಿತ್ತು.

೩. ವಿಕ್ರಮಶೀಲಾ : ಈ ಶೈಕ್ಷಣಿಕ ಕೇಂದ್ರವು ಬಿಹಾರದ ಗಂಗಾನದಿಯ ದಡದಲ್ಲಿತ್ತು ಈ ಕೇಂದ್ರದಲ್ಲಿ ಪ್ರವೇಶಾತಿಗೆ ಪ್ರವೇಶ ಪರೀಕ್ಷೆಯನ್ನು ಕಡ್ಡಾಯವಾಗಿ ಬರೆಯಲೇಬೇಕಿತ್ತು ಮತ್ತು ಇಲ್ಲಿರುವ ಎಲ್ಲಾ ಶಿಕ್ಷಕರು ವಿದ್ವಾಂಸರಾಗಿದ್ದರು. ಇಲ್ಲಿ ಪ್ರಮುಖವಾಗಿ ಬೋಧಿಸುವ ವಿಷಯಗಳೆಂದರೆ ವ್ಯಾಕರಣ, ತರ್ಕಶಾಸ್ತ್ರ, ತತ್ವಶಾಸ್ತ್ರ, ತಂತ್ರವಿದ್ಯೆ ಮುಂತಾದವುಗಳನ್ನು ಕಲಿಸಲಾಗುತ್ತಿತ್ತು, ಅಲ್ಲದೆ ಪ್ರಮುಖವಾಗಿ ಧಾರ್ಮಿಕ ಗ್ರಂಥಗಳನ್ನು ಇಲ್ಲಿ ಭಾಷಾಂತರಿಸಲಾಗುತ್ತಿತ್ತು ಎಂದು ತಿಳಿದುಬರುತ್ತದೆ.

ಇಷ್ಟೆ ಅಲ್ಲದೆ ಇವರ ಅವಧಿಯಲ್ಲಿ ಇನ್ನೂ ಹಲವಾರು ಪ್ರಮುಖ ಶೈಕ್ಷಣಿ ಕೇಂದ್ರಗಳಿದ್ದವು ಅವುಗಳೆಂದರೆ ಬಾಲಬಾಯಿ, ಅದಾಂತಪುರಿ, ಮಿಥಿಲಾ, ನಾಡಿಯಾ ಮತ್ತು ಜಗದ್ದಾಲ ಎಂಬ ಶೈಕ್ಷಣಿಕ ಕೇಂದ್ರಗಳು ತಕ್ಷಶಿಲಾ, ನಲಂದಾ ಮತ್ತು ವಿಕ್ರಮಶಿಲಾಗಳಷ್ಟೆ ಪ್ರಾಮುಖ್ಯತೆಯನ್ನು ಪಡೆದು ಕೊಂಡಿದ್ದವು ಎಂದು ಹೇಳಬಹುದು.

## ಉಪಸಂಹಾರ:

ಒಟ್ಟಾರೆಯಾಗಿ ಹೇಳಬೇಕೆಂದರೆ ಬೌದ್ಧ ಕಾಲದ ಶಿಕ್ಷಣ ಪದ್ಧತಿಯಲ್ಲಿ ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಗೆ, ಉತ್ತಮ ಸಮಾಜ ನಿರ್ಮಾಣಕ್ಕೆ ತುಂಬಾ ಸಹಾಯಕವಾಗಿತ್ತು. ಬೌದ್ಧರು ಕೇವಲ ಮೇಲ್ವರ್ಗದವರಿಗೆ ಮಾತ್ರವಲ್ಲದೆ, ಮೇಲು ಕೀಳು ಎನ್ನದೇ ಸಮಾಜದ ಎಲ್ಲಾ ವರ್ಗದವರಿಗೂ ಹಿತಬಯಸುವ ಶಿಕ್ಷಣವನ್ನು ನೀಡುತ್ತಿದ್ದರು., ಅಲ್ಲದೆ ಸ್ತ್ರೀಯರು ಸಹಿತ ಪುರುಷರ ಸಮನಾಗಿ ನಿಲ್ಲಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡು ಶಿಕ್ಷಣವನ್ನು ಕೊಡುತ್ತಿದ್ದರು., ಇವರು ಮಾಡಿದಂತಹ ಶೈಕ್ಷಣಿಕ ನೀತಿಗಳು ಅಂದಿನ ಸಮಾಜವನ್ನು ಜಾಗೃತಗೊಳಿಸುವಷ್ಟು ಪರಿಣಾಮಕಾರಿಯಾಗಿದ್ದವು. ಇವರು ನೀಡುವ ಶಿಕ್ಷಣ ಮಾದ್ಯಮವು

ಅಂದಿನ ಆಡು ಭಾಷೆಯಲ್ಲಿತ್ತು ಇದರಿಂದ ಜನರು ಹೆಚ್ಚು ಆಕರ್ಷಣೆಗೆ ಒಳಪಡುತ್ತಿದ್ದರು., ಇವರ ಶಿಕ್ಷಣ ಪದ್ಧತಿಯು ಇಂದಿನ ಸಮಾಜಕ್ಕೂ ಮಾದರಿಯಾಗಿದೆ ಅಲ್ಲದೆ ಇವರು ಅನುಸರಿಸಿದ ಶೈಕ್ಷಣಿಕ ನಿಯಮಗಳು ಇಂದಿನ ವಿಶ್ವವಿದ್ಯಾನಿಲಯಗಳಿಗೂ ಮಾದರಿಯಾಗಿವೆ.

## ಆಧಾರ ಗ್ರಂಥಗಳು


೧. ಕೊಂಗವಾಡ. ಎನ್.ಬಿ. : ಭಾರತದಲ್ಲಿ ಶಿಕ್ಷಣ ಹಾಗೂ ಪ್ರಚಲಿತ ಸಮಸ್ಯೆಗಳು, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೩.

೨. ಡಾ.ಜಂತ್ಲಿ.ಆರ್.ಟಿ : ಉದಯೋನ್ಮುಖ ಭಾರತದಲ್ಲಿ ಶಿಕ್ಷಣ ಹಾಗೂ ಪ್ರಚಲಿತ ಸಮಸ್ಯೆಗಳು.

೩. ಯಾದವಾಡ.ಎಸ್.ಬಿ. : ಉದಯೋನ್ಮುಖ ಭಾರತದಲ್ಲಿ ಶಿಕ್ಷಣ, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೭.

೪. ಪ್ರೊ.ರಘು.ಕೆ. : ಭಾರತದಲ್ಲಿ ಶಿಕ್ಷಣ ಮತ್ತು ಸಮಾಜ, ಚೇತನ ಬುಕ್ ಹೌಸ್, ಮೈಸೂರು,೧೯೯೭.

೫. ರುದ್ರೇಶ.ಬಿ.ಎಸ್ : ಉದಯೋನ್ಮುಖ ಭಾರತದಲ್ಲಿ ಶಿಕ್ಷಣ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪.

೬. ಡಾ. ಶಿವಶಂಕರ ಎಚ್.ವಿ : ಭಾರತದಲ್ಲಿ ಶಿಕ್ಷಣ, ಹಂಜಿ ಪ್ರಕಾಶನ ದಾವಣಗೆರೆ, ೨೦೦೭.

೭. ಡಾ.ಶಿವಯ್ಯ : ಉದಯೋನ್ಮುಖ ಭಾರತದಲ್ಲಿ ಶಿಕ್ಷಣ, ಪೂಜಾ ಪ್ರಕಾಶನ, ಎಸ್.ಎಸ್.ಬಡಾವಣೆ 'ಬಿ' ಬ್ಲಾಕ, ದಾವಣಗೆರೆ-೦೪.

೮. ಶೈಲಜಾ.ಎಚ್.ಎಮ್ ಮತ್ತು ರಾಜೀವ್.ಪಿ.ಗುಂಡಾಳ : ಭಾರತೀಯ ತಾತ್ವಿಕ ಪರಂಪರೆ ಮತ್ತು ಶಿಕ್ಷಣ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೬.